**ಅಸಲು ದಾವ ಸಂಖ್ಯೆ: 1313/2022**

**ಪಿ.ಡಬ್ಲೂ -1**

**ದಿ: 18-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SPK ರವರಿಂದ:-**

1. ಸಿಟಿಎಸ್ ನಂಬರ 4905/24/A-2 ರ ಆಸ್ತಿಯಲ್ಲಿ ನಾನು ಮನೆ ಕಟ್ಟಿಸಿರುತ್ತೇನೆ ಎಂದರೆ ಸಾಕ್ಷಿ ತಾನು ಸಿಟಿಎಸ್ ನಂಬರ 4905/24/A-1 ರಲ್ಲಿ ಮನೆ ಕಟ್ಟಿಸಿರುವುದಾಗಿ ನುಡಿಯುತ್ತಾರೆ. ಸದರಿ ಮನೆ ಕಟ್ಟುವ ಸಂದರ್ಭದಲ್ಲಿ ನಾನು ಮಹಾನಗರ ಪಾಲಿಕೆಯಿಂದ ಪರವಾನಿಗೆ ಪಡೆದಿರುತ್ತೇನೆ. ನಾನು ಸದರಿ ಮನೆಯನ್ನು ಯಾವುದೇ ಪರವಾನಿಗೆ ಇಲ್ಲದೆ ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆ ನೆಲಮಹಡಿ ಹಾಗೂ 1ನೇ ಮಹಡಿ ಹೊಂದಿರುತ್ತದೆ. ನಾವು 1ನೇ ಮಹಡಿಯಲ್ಲಿ ವಾಸವಿರುತ್ತೇವೆ. ಸದರಿ ಕಟ್ಟಡದಲ್ಲಿ ಶೌಚಾಲಯ 1ನೇ ಮಹಡಿಯಲ್ಲಿ ಇರುತ್ತದೆ ಎಂದರೆ ಸರಿ. 1ನೇ ಮಹಡಿಯ ಕಟ್ಟಡವನ್ನು ನಾವು ಪ್ರತಿವಾದಿಯ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಕಟ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 1ನೇ ಮಹಡಿಯಲ್ಲಿ ನಾವು ಪ್ರತಿವಾದಿಯ ಜಾಗದಲ್ಲಿ 6 ಬೀಮ್ ಗಳನ್ನು ಹಾಕಿ ಅದರ ಮೇಲೆ 1ನೇ ಮಹಡಿಯ ಶೌಚಾಲಯವನ್ನೆಲ್ಲ ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬೀಮ್ ಗಳ ಒಂದು ಭಾಗ ಪ್ರತಿವಾದಿಯ ಮನೆಯ ಮೇಲೆ ವಿಶ್ರಾಂತಿಸುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಡ್ರೈನೇಜ ಪೈಪಗಳಿಂದ ನೀರು ಪ್ರತಿವಾದಿಯ ಆಸ್ತಿಯಲ್ಲಿ ಹರಿಯುತ್ತದೆ ಎಂದರೆ ಸರಿಯಲ್ಲ.

2. ಅಸಲು ದಾವಾ ಸಂಖ್ಯೆ 27/2010 ರಂತೆ ನಮ್ಮ ಹಾಗೂ ಪ್ರತಿವಾದಿಯ ನಡುವೆ ವಾಟ್ನಿ ದಾವೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯ ತೀರ್ಪಿನಲ್ಲಿ ತಾತಪ್ಪ ರವರು ಮಾಡಿದ ಮೃತ್ಯು ಪತ್ರ ಸರಿಯಿರುತ್ತದೆ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ. ಸದರಿ ದಾವೆಯ ಮೇಲೆ FDP 20/2020 ರ ಅಂತಿಮ ಡಿಕ್ರಿಗಾಗಿ ದಾವೆ ನಡೆಯುತ್ತಿದೆ ಎಂದರೆ ಸರಿ. ಸದರಿ ಮೃತ್ಯು ಪತ್ರದ

ಮುಖಾಂತರ ಆಸ್ತಿಯಲ್ಲಿ ಈಗಾಗಲೇ ವಾಟ್ನಿ ಆದಕಾರಣ ಮತ್ತೆ ಸದರಿ ಆಸ್ತಿಯಲ್ಲಿ ವಾಟ್ನಿ ಆಗುವ ಅವಶ್ಯಕತೆ ಇರುವುದಿಲ್ಲ ಎಂದು ಅಸಲು ದಾವಾ ಸಂಖ್ಯೆ 27/2010 ರಲ್ಲಿ ಉಲ್ಲೇಖಿಸಲಾಗಿದೆ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಈ ಖೊಟ್ಟಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಯನ್ನು ಅವರು ಮಾರಾಟ ಮಾಡುತ್ತಿಲ್ಲ ಆದರೂ ಸಹ ನಾನು ಅವರ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿಯಲ್ಲಿ ಈಗಾಗಲೇ ಹಿಸ್ಸೆ ಆಗಿ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಅವರಿಗೆ ಸಂಪೂರ್ಣ ಹಕ್ಕು ಇದ್ದು, ಅವರ ಹಿಸ್ಸೆಗೆ ಬಂದ ಆಸ್ತಿಯನ್ನು ಅವರ ಇಚ್ಛೆಯಂತೆ ಅವರು ಮಾರಾಟ ಮಾಡಬಹುದು ಎಂದರೆ ಸರಿ. ಪ್ರತಿವಾದಿಯ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸಾಕ್ಷಿ ಬೋಳು, ಬಾವಿ ಇರುವ ಜಾಗ ಸಮಾಯಿಕ ಇರುವ ಕಾರಣ ತನಗೂ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**